# ಜಿಲ್ಲಾ ಪಂಚಾಯತ್ ಹಾಸನ

## ಅಧಿಕೃತ ಜ್ಞಾಪನ

ವಿಷಯ:- ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿಗೆ 2ನೇ ಕಂತಿನ ಅನುದಾನ ರೂ 504.51 ಲಕ್ಷಗಳನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:- (1) ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:FD-77/ ZPA/2003/ ದಿನಾಂಕ:8-9-2004.
(2) ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:FD-04/ ZPA/2003/ ದಿನಾಂಕ:2-5-2005.
(3) ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:FD-07/ ZPA/ 2003/ ದಿನಾಂಕ:14-7-2005.
(4) ಸರ್ಕಾರದ ಆದೇಶ ಸಂಖ್ಯೆ:ಮಮಇ/36/ಐಸಿಡಿ/2012/ ಬೆಂಗಳೂರು/ದಿನಾಂಕ:17-8-2012.
(5) ಉಪನಿರ್ದೇಶಕರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ರವರ ಪತ್ರಸಂಖ್ಯೆ:ಉನಿಹಾ/ಐಸಿಡಿ/ಅಭಿ-1/2012-13/051/ ದಿನಾಂಕ:9-5-2012.

-o-

## ಪ್ರಸ್ತಾವನೆ

ಉಲ್ಲೇಖ(1)ರಲ್ಲಿನ ಆದೇಶದಲ್ಲಿ ಜಿಲ್ಲಾಪಂಚಾಯತ್ ನಿಧಿ/ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕ ನಿರ್ವಹಣೆ ಬಗ್ಗೆ ವಿವರಿಸಿದೆ. ಅದರಂತೆ ಜಿಲ್ಲಾಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿಗಳನ್ನು ಜಿಲ್ಲಾಪಂಚಾಯತ್/ ತಾಲ್ಲೂಕು ಪಂಚಾಯತ್ ಆಯಾ ನಿಧಿ-I, II ಹಾಗೂ III ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಅದರಂತೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳು ಆಯಾ ನಿಧಿಗಳಲ್ಲಿ ಬರುವ ಯೋಜನೆಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಇಡಬೇಕಾಗಿದೆ. 2012-13ನೇ ಸಾಲಿನ 2ನೇ ಕಂತಿನ ಕೇಂದ್ರಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅನುದಾನವನ್ನು ತಾಲ್ಲೂಕು ಪಂಚಾಯಿತಿಗೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗಿದೆ.

ಉಲ್ಲೇಖ (4) ರಲ್ಲಿ ನಮೂದಿಸಿದ ಆದೇಶದ ಪ್ರಕಾರ ಜಿಲ್ಲೆಯ 8 ತಾಲ್ಲೂಕು ಪಂಚಾಯತ್ ಕಾರ್ಯಾಲಯಗಳಿಗೆ ಈ ಮೇಲಿನ ಯೋಜನೆಯಡಿ, 2012-13ನೇ ಸಾಲಿನ 2ನೇ ಕಂತಿನ ಅನುದಾನ ರೂ 506.19 ಲಕ್ಷ ಬಿಡುಗಡೆಯಾಗಿದ್ದು, ಉಪನಿದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ರವರ ಉಲ್ಲೇಖ(5)ರ ಪತ್ರದಂತೆ 8 ತಾಲ್ಲೂಕುಗಳಿಗೆ ಮರು ಹಂಚಿಕೆ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸಂಖ್ಯೆ:ZPH/BUD-1/TPG-8/2012-13** **ದಿನಾಂಕ:04-09-2012**

## ಆದೇಶ

2012-13ನೇ ಸಾಲಿನ ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಸರ್ಕಾರವು ಉಲ್ಲೇಖ(4)ರ ಆದೇಶದಲ್ಲಿ ಲೆಕ್ಕಶೀರ್ಷಿಕೆ:2235-02-197-6-03 ಯೋಜನೆಯಡಿ ಅನುದಾನ ರೂ 504.51 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಅನುದಾನವನ್ನು ಉಲ್ಲೇಖ(5)ರಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ರವರ ಕೋರಿಕೆಯಂತೆ 8 ತಾಲ್ಲೂಕುಗಳಿಗೆ ಮರು ಬಿಡುಗಡೆ ಮಾಡಿದೆ.

ಹೀಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಆಯಾಯ ತಾಲ್ಲೂಕುಗಳಿಗೆ ಸಂಬಂಧಿಸಿದ ಅನುದಾನವನ್ನು ಬಿಳಿ ಬಣ್ಣದ ಚಲನ್ ಮೂಲಕ ಆಯಾಯ ತಾಲ್ಲೂಕು ಪಂಚಾಯಿತಿ ನಿಧಿ- Iಕ್ಕೆ ಜಮಾ ಮಾಡಿಕೊಳ್ಳಲು ತಿಳಿಸಿದೆ ಹಾಗೂ ಬಿಳಿ/ಹಳದಿ ಬಣ್ಣದ ಪೇಯೀಸ್ ರಸೀದಿ ಮತ್ತು ಹಳದಿ ಚಲನ್ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-1 ಎಂದು ಮೊಹರು ಹಾಕುವುದು.

ಈ ರೀತಿ ತಾಲ್ಲೂಕು ಪಂಚಾಯಿತಿ ನಿಧಿ-Iಕ್ಕೆ ಜಮಾ ಮಾಡಿಕೊಂಡ ಅನುದಾನವನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಒಂದೇ ಕಂತಿನಲ್ಲಿ ಪೂರ್ಣ ಹಣ ಬಿಡುಗಡೆ ಮಾಡಿ ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಈ ಅನುದಾನವನ್ನು ನಿಯಮಾನುಸಾರ ಆಯಾಯ ಸಕ್ಷಮ ಪ್ರಾಧಿಕಾರಿಗಳಿಂದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದು ಕೊಂಡು ಖರ್ಚು ಭರಿಸಲು ತಿಳಿಸಿದೆ. ವೆಚ್ಚ ಭರಿಸುವಾಗ ಬಿಲ್ಲಿನ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-I ಎಂದು ಮೊಹರು ಹಾಕಲು ಹಾಗೂ ವೆಚ್ಚವನ್ನು 2211-00-102-0-22 ಯೋಜನೆ (ತಾಲ್ಲೂಕು ಪಂಚಾಯಿತಿ) ಅಡಿ ಭರಿಸುವಂತೆ ಅನುದಾನ ಮರು ಬಿಡುಗಡೆ (ಅನುಷ್ಠಾನಾಧಿಕಾರಿಗಳಿಗೆ) ಮಾಡುವ ಆದೇಶದಲ್ಲಿ ಸೂಚಿಸುವುದು.

**Grant No-8**

ZP. Order No:ZPH/BUD-1/TPG-8/2012-13/Dated:04/9/2012

HASSAN ZILLA PANCHAYAT

HASSAN DIST:CODE-410 (Rs.in Lakhs)

| SL NO | Name of the Taluks | D.O.Code | 2235-02-197-6-03 | |
|---|---|---|---|---|
| | | | Plan | Non-Plan |
| 1 | ಹಾಸನ | 1300QQ0002 | 75.71 | – |
| 2 | ಆಲೂರು | 1301QQ0001 | 38.46 | – |
| 3 | ಅರಕಲಗೂಡು | 1302QQ0001 | 57.96 | – |
| 4 | ಅರಸೀಕೆರೆ | 1303QQ0001 | 92.22 | – |
| 5 | ಬೇಲೂರು | 1304QQ0001 | 55.95 | – |
| 6 | ಚನ್ನರಾಯಪಟ್ಟಣ | 1305QQ0084 | 79.69 | – |
| 7 | ಹೊಳೆನರಸೀಪುರ | 1306QQ0006 | 54.20 | – |
| 8 | ಸಕಲೇಶಪುರ | 1307QQ0001 | 52.00 | – |
| | ಒಟ್ಟು | | 506.19 | 0 |

(ಒಟ್ಟು ಐದು ಕೋಟಿ ಆರು ಲಕ್ಷದ ಹತ್ತೊಂಭತ್ತು ಸಾವಿರ ರೂಪಾಯಿಗಳು ಮಾತ್ರ)

(ಸಹಿ)
ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

<u>ಪ್ರತಿಯನ್ನು:-</u>

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾಪಂಚಾಯತ್,ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗೆ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
4. ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗೆ ಸಲ್ಲಿಸಿದೆ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಕಾರ್ಯದರ್ಶಿಗಳು(ಆಡಳಿತ) ಮತ್ತು (ಅಭಿವೃದ್ಧಿ),ಮುಖ್ಯ ಯೋಜನಾಧಿಕಾರಿಗಳು,ಜಿಲ್ಲಾಪಂಚಾಯತ್, ಹಾಸನ ರವರ ಮಾಹಿತಿಗೆ.
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್_____________ ತಾಲ್ಲೂಕು ಇವರ ಅಗತ್ಯ ಕ್ರಮಕ್ಕಾಗಿ.
7. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ, ಹಾಸನ ರವರ ಮಾಹಿತಿಗೆ.
8. ಉಪ ಖಜಾನಾಧಿಕಾರಿಗಳು ____________ ತಾಲ್ಲೂಕು ರವರ ಮಾಹಿತಿಗೆ.
9. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ರವರಿಗೆ ಮಾಹಿತಿಗಾಗಿ.
10. ಕಚೇರಿ ಪ್ರತಿ.

ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

W&C-1)